ಅಸಲು ದಾವೆ ಸಂಃ 240/2018
ಪಿ.ಡಬ್ಲ್ಯೂಃ1

ಈ ದಿನ ದಿನಾಂಕಃ 20-07-2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀಸವಾಲು ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ</u>

ದಾವಾ ಸಲ್ಲಿಸುವ ಕಾಲಕ್ಕೆ ದಾವಾ ಆಸ್ತಿಯ ಖಾತೆಯು ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವೆ ಸಲ್ಲಿಸಲು ವಕೀಲರಿಗೆ ನಾನು ಹಾಗೂ ನನ್ನ ಅಕ್ಕ ತಂಗಿಯರು ಮಾಹಿತಿ ನೀಡಿರುತ್ತೇವೆ. ವಾದ ಪತ್ರದಲ್ಲಿ ಮುನಿಸಿಪಾಲಿಟಯಲ್ಲಿ ದಾವಾ ಆಸ್ತಿಯ ಖಾತೆಯು ನಾಲ್ಕು ಮತ್ತು ಐದನೇ ಪ್ರತಿವಾದಿಯ ತಾಯಿ ಬೀಬೀ ಜಾನ್ ರವರ ಹೆಸರಿನಲ್ಲಿ ಇರುತ್ತದೆ ಎಂದು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಖಾತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ.1 ರಿಂದ 5 ರ ಲ್ಲಿರುವ ದಾಖಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿ. ಉದ್ದೇಶಪೂರ್ವಕವಾಗಿ ಮುನಿಸಿಪಾಲಿಟಿಯಿಂದ ಪಡೆದ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಮುನಿಸಿಪಾಲಿಟಿ ದಾಖಲೆಗಳಲ್ಲಿ ನನ್ನ ತಂದೆಯ ಹೆಸರು ನಮೂದಾಗಿರುತ್ತದೆ.

2. ದಾವಾ ಆಸ್ತಿಯ ಚೆಕ್ಕು ಬಂದಿ ಪೂರ್ವಕ್ಕೆ ರಮೀಜಾಬಿ ಅವರ ಮನೆ , ಪಶ್ಚಿಮಕ್ಕೆ ಮುನಿಸಿಪಾಲಿಟಿ ಖಾಲಿ ಜಾಗ , ಉತ್ತರಕ್ಕೆ ಯಾಸೀನ್ ಸಾಬ್ ರವರ ಮನೆ , ದಕ್ಷಿಣಕ್ಕೆ ಖಾಲಿ ಜಾಗ ಹಾಗೂ ಕರಿ ಹೆಂಚಿನ ಮನೆ. ಸದರಿ ಚೆಕ್ಕು ಬಂದಿಯ ವಿಸ್ತೀರ್ಣ ಪೂರ್ವ ಪಶ್ಚಿಮ 24 ಅಡಿ , ಉತ್ತರ ದಕ್ಷಿಣ 90 ಅಡಿ ಎಂದರೆ ಸರಿ. ಸದರಿ ಚೆಕ್ಕು ಬಂದಿಯ ಸ್ಥಳದಲ್ಲಿ ಶೀಟು ಹಾಗೂ ಹೆಂಚಿನ ಹೊದಿಕೆಯುಳ್ಳ ಎರಡು ಮನೆಗಳಿರುತ್ತವೆ. ಶೀಟಿನ ಮನೆಯಲ್ಲಿ 3 ನೇ ಪ್ರತಿವಾದಿ ವಾಸಿಸುತ್ತಿದ್ದಾರೆ. ಹೆಂಚಿನ ಮನೆಯಲ್ಲಿ ನಾವೆಲ್ಲರೂ ಒಟ್ಟಾಗಿ ವಾಸ ಮಾಡುತ್ತಿದ್ದೇವೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿದಾಗ ಅದರಲ್ಲಿರುವ ಶೀಟ್ ಹೊದಿಕೆಯುಳ್ಳ ನೆಲಮಹಡಿಯ ಮನೆಯನ್ನು ತನ್ನದೆಂದು ನೋಡಿ ಗುರುತಿಸಿದ್ದರಿಂದ

ನಿಡಿ.1 ಎಂದು ಗುರುತಿಸಲಾಯಿತು. ಸದರಿ ಮನೆಯಲ್ಲಿ ಸುಮಾರು 10-12 ವರುಷಗಳಿಂದ 3 ನೇ ಪ್ರತಿವಾದಿ ವಾಸಿಸುತ್ತಿದ್ದರು. ನಿಡಿ.1 ರಲ್ಲಿ ಕಾಣುವ ಮಹಡಿಯ ಮನೆಯಲ್ಲಿ ಯಾರೂ ವಾಸಿಸುತ್ತಿಲ್ಲ. ಸದರಿ ಸ್ಥಳದಲ್ಲಿ 4 ಮತ್ತು 5 ನೇ ಪ್ರತಿವಾದಿ ಮನೆಗಳನ್ನು ಕಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಮತ್ತೊಂದು ಭಾವಚಿತ್ರವನ್ನು ತೋರಿಸಿದಾಗ 4 ಮತ್ತು 5 ನೇ ಪ್ರತಿವಾದಿಯ ಮನೆಗಳೆಂದು ನೋಡಿ ಗುರುತಿಸಿದ್ದರಿಂದ ನಿಡಿ.2 ಎಂದು ಗುರುತಿಸಲಾಯಿತು.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.